

بِسۡمِ اللّٰہِ الرَّحۡمَنِ الرَّحِیۡمِ

# ಹೊಸ ವರ್ಷ ಪ್ರಾರಂಭವಾಗುವಾಗ ನಾವು ನಮ್ಮ ಆತ್ಮಪರಿಶೋಧನೆ ಮಾಡಿಕೊಳ್ಳಬೇಕಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **30–12–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಎರಡು ದಿನಗಳ ನಂತರ ಇನ್‌ಶಾಅಲ್ಲಾಹ್ ಹೊಸ ವರ್ಷ ಆರಂಭವಾಗುವುದು. ಮುಸ್ಲಿಮರಾದ ನಾವು ಚಂದ್ರಮಾನ ಗಣನೆ ಪ್ರಕಾರ ಸಹ ವರ್ಷಾರಂಭ ಮಾಡುತ್ತೇವೆ. ಮತ್ತು ಸೌರಮಾನ ಪ್ರಕಾರ ಸಹ ವರ್ಷಾರಂಭ ಮಾಡುತ್ತೇವೆ. ಚಂದ್ರಮಾನ ಪ್ರಕಾರದ ಕಾಲಗಣನೆ ಮುಸ್ಲಿಮರಲ್ಲಿ ಮಾತ್ರವಲ್ಲ ಅನೇಕ ಬೇರೆ ಜನಾಂಗಗಳಲ್ಲಿ ಸಹ ಹಿಂದೆ ಜಾರಿಯಲ್ಲಿತ್ತು. ಅವರು ಚಂದ್ರಮಾನ ಪ್ರಕಾರ ವರ್ಷಾರಂಭ ಮಾಡುತ್ತಿದ್ದರು. ಚೀನಿಗಳಲ್ಲೂ ಹಿಂದುಗಳಲ್ಲೂ ಈಗ ಸಹ ಇದು ಜಾರಿಯಲ್ಲಿದೆ. ಬೇರೆ ಜನಾಂಗಗಳಲ್ಲೂ ಇದೆ. ಅನೇಕ ಧರ್ಮಗಳಲ್ಲಿ ಚಂದ್ರಮಾನ ಕಾಲಗಣನೆ ಇದೆ. ಇಸ್ಲಾಮ್‌ಗೆ ಮೊದಲು ಅರಬ್ ದೇಶದಲ್ಲಿ ದಿನಗಳನ್ನು ಚಂದ್ರಮಾನ ಕಾಲಗಣನೆ ಪ್ರಕಾರ ಲೆಕ್ಕ ಮಾಡುತ್ತಿದ್ದರು. ಈಗ ಲೋಕದಲ್ಲಿ ಸಾಮಾನ್ಯವಾಗಿ ಗ್ರೆಗೋರಿಯನ್ ಕೆಲೆಂಡರ್ ಬಳಸಲಾಗುತ್ತಿದೆ. ಎಲ್ಲ ಜನರೆಡೆಯಲ್ಲಿ ಅದು ಸಾಮಾನ್ಯವಾಗಿಬಿಟ್ಟಿದೆ. ಆದುದರಿಂದ ಪ್ರತಿಯೊಂದು ದೇಶ ಮತ್ತು ಪ್ರತಿಯೊಂದು ಜನಾಂಗ ತಮ್ಮ ದಿನಗಳನ್ನೂ ತಿಂಗಳುಗಳನ್ನೂ ಲೆಕ್ಕ ಹಾಕಲು ಈ ಕೆಲೆಂಡರನ್ನು ಬಳಸುತ್ತಿದ್ದಾರೆ. ಈ ಕಾರಣದಿಂದ ಲೋಕದಲ್ಲಿ ಪ್ರತಿವರ್ಷ ಪ್ರತಿಯೊಂದು ಸ್ಥಳದಲ್ಲಿ ಈ ಕೆಲೆಂಡರಿನ ಪ್ರಕಾರ ಜನವರಿ ಒಂದನೆ ದಿನಾಂಕದಿಂದ ವರ್ಷಾರಂಭವಾಗುತ್ತದೆ. ಮತ್ತು ಡಿಸೆಂಬರ್ ದಿನಾಂಕ 31ರಂದು ವರ್ಷ ಮುಕ್ತಾಯವಾಗುತ್ತದೆ.

ಹೊಸ ವರ್ಷ ಬರುತ್ತದೆ. ಹನ್ನೆರಡು ತಿಂಗಳು ದಾಟಿಹೋಗುತ್ತವೆ. ಚಂದ್ರಮಾನ ಪ್ರಕಾರದ ವರ್ಷವಾಗಲಿ ಸೌರಮಾನ ಪ್ರಕಾರದ ವರ್ಷವಾಗಲಿ ಲೋಕದ ಜನರು ದಿನಗಳನ್ನೂ, ಮಾಸಗಳನ್ನೂ, ವರ್ಷಗಳನ್ನೂ ಲೌಕಿಕ ಸಂಭ್ರಮಗಳಲ್ಲೂ ಲೌಕಿಕವಾಗಿ ಗಳಿಸುವ ನೆಮ್ಮದಿಯಲ್ಲೂ ಜೀವಿಸಿ ಕಳೆಯುತ್ತಿದ್ದಾರೆ. ಮುಸ್ಲಿಮರಾಗಿರಲಿ ಮುಸ್ಲಿಮೇತರರಾಗಿರಲಿ ಹೀಗೆಯೇ ಮಾಡುತ್ತಾರೆ. ಹೊಸ ವರ್ಷ ಪ್ರಾರಂಭವಾಗುವ ಜನವರಿ ಒಂದನೆ ದಿನಾಂಕದಂದು ಲೌಕಿಕ ಜನರು ಮಾಡದೆ ಇರುವ ಕೆಲಸ ಏನಿದೆ? ವಿಶಿಷ್ಟವಾಗಿ ಪಶ್ಚಿಮದ ದೇಶಗಳಲ್ಲಿ ಅಥವಾ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ, ಅದೇರೀತಿ ಲೋಕದ ಇತರ ಭಾಗಗಳಲ್ಲೂ ಸಹ, ಡಿಸೆಂಬರ್ 31 ಮತ್ತು ಜನವರಿ ಒಂದರ ಮಧ್ಯವಿರುವ ರಾತ್ರಿಯಲ್ಲಿ ಏನೆಲ್ಲಾ ಬೊಬ್ಬೆ, ಗದ್ದಲಗಳಿರುತ್ತವೆ. ವಿಶಿಷ್ಟವಾಗಿ ಮಧ್ಯರಾತ್ರಿ ತನಕ ಎಚ್ಚರದಿಂದಿರುತ್ತಾರೆ ಅಥವಾ ಇಡೀ ರಾತ್ರಿ ನಿದ್ರಿಸದೆ ಎಚ್ಚರದಿಂದಿರುತ್ತಾರೆ. ಕೇವಲ ಬೊಬ್ಬೆ ರಂಪಾಟಗಳಿಗೋಸ್ಕರ, ಮದ್ಯ ಮಾಂಸಕ್ಕೋಸ್ಕರ, ನೃತ್ಯ ಸಂಗೀತಕ್ಕೋಸ್ಕರ. ಈರೀತಿ ಹಿಂದಿನ ವರ್ಷದ ಮುಗಿತಾಯ ಲಘು ಕೃತ್ಯಗಳಿಂದ ಮತ್ತು ನಿರರ್ಥಕವಾದವುಗಳಿಂದ ಆಗುತ್ತದೆ. ಹೊಸ ವರ್ಷದ ಆರಂಭ ಸಹ ಲಘು ಕೃತ್ಯಗಳಿಂದಾಗುತ್ತದೆ. ಲೋಕದ ಬಹುತೇಕ ಜನರ ಧಾರ್ಮಿಕ ಕಣ್ಣು ಕುರುಡಾಗಿದೆ. ಆದುದರಿಂದ ಓರ್ವ ಸತ್ಯವಿಶ್ವಾಸಿಯ ದೃಷ್ಟಿ ಎಲ್ಲಿಗೆ ತಲಪುತ್ತದೆಯೋ ಅಲ್ಲಿಗೆ ಅವರ ದೃಷ್ಟಿ ತಲಪಲಾರದು. ಒಬ್ಬ ಸತ್ಯವಿಶ್ವಾಸಿಯ ವೈಭವವೇನೆಂದರೆ ಅವನು ಲಘು ಕೃತ್ಯಗಳಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು ಮತ್ತು ಅವುಗಳ ಬಗ್ಗೆ ಬೇಸರ ಸೂಚಿಸಬೇಕು ಮಾತ್ರವಲ್ಲ ಅವನು ತನ್ನನ್ನು ಪರಿಶೋಧಿಸಬೇಕು. ತನ್ನ ಜೀವಿತದಲ್ಲಿ ಒಂದು ವರ್ಷ ಆರಂಭವಾಗಿ ಕೊನೆಗೊಂಡಿದೆ. ಅದು ನನಗೆ ಏನನ್ನು ಕೊಟ್ಟು ಹೋಗಿದೆ ಮತ್ತು ಏನನ್ನು ತೆಗೆದುಕೊಂಡು ಹೋಗಿದೆ ಎಂದು ಅವನು ಚಿಂತಿಸಬೇಕು. ನಾವು ಕಳೆದ ವರ್ಷ ಏನನ್ನು ಗಳಿಸಿದೆವು, ಏನನ್ನು ಕಳೆದುಕೊಂಡೆವು. ಓರ್ವ ಸತ್ಯವಿಶ್ವಾಸಿ ತಾನು ಏನನ್ನು ಗಳಿಸಿದೆನು ಏನನ್ನು ಕಳೆದುಕೊಂಡೆನು ಎನ್ನುವುದನ್ನು ಲೌಕಿಕ ದೃಷ್ಟಿಯಲ್ಲಿ ನೋಡಬೇಕೆ? ಅವನ ಲೌಕಿಕ ಸ್ಥಿತಿ ಎಷ್ಟು ಉತ್ತಮವಾಗಿದೆ ಎಂದು ನೋಡಬೇಕೆ? ಅಥವಾ ಧಾರ್ಮಿಕ ದೃಷ್ಟಿಯಿಂದ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಏನನ್ನು ಕಳೆದುಕೊಂಡೆ ಏನನ್ನು ಗಳಿಸಿದೆ ಎಂದು ನೋಡಬೇಕೆ? ಧಾರ್ಮಿಕ ದೃಷ್ಟಿಯಿಂದ ನೋಡುವುದಾದರೆ ಯಾವ ಪರಿಮಾಣ ಮಟ್ಟಕ್ಕೆ ಹೋಲಿಸಿ, ತಾನು ಗಳಿಸಿದ್ದೇನು ಕಳೆದುಕೊಂಡದ್ದೇನು ಎಂದು ತಿಳಿದು ಕೊಳ್ಳಬೇಕು?

ಅಹ್ಮದಿಯರಾದ ನಾವು ಅದೃಷ್ಟಶಾಲಿಗಳಾಗಿದ್ದೇವೆ. ವಾಗ್ದತ್ತ ಮಹ್‌ದಿ ಮಸೀಹರನ್ನು ನಂಬುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದನು. ಅವರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಉಪದೇಶಗಳ ಸಾರಾಂಶವನ್ನು ನಮ್ಮ ಮುಂದಿರಿಸಿದರು. ಅವರು ಹೇಳಿದರು, ನೀವು ಆಧ್ಯಾತ್ಮಿಕ ಮಟ್ಟವನ್ನು ನಿಮ್ಮ ಮುಂದೆ ಇರಿಸಿದರೆ ನಿಮಗೆ ತಿಳಿಯುವುದು, ನೀವು ನಿಮ್ಮ ಜೀವಿತದ ಉದ್ದೇಶಲಕ್ಷ್ಯವನ್ನು ಈಡೇರಿಸಿರುವಿರೋ ಅಥವಾ ಈಡೇರಿಸಲು ಪ್ರಯತ್ನಿಸುತ್ತಿದ್ದೀರೋ ಅಥವಾ ಇಲ್ಲವೋ ಎಂದು. ನೀವು ಆಧ್ಯಾತ್ಮಿಕತೆಯ ಈ ಮಾದರಿ ಮಟ್ಟವನ್ನು ನಿಮ್ಮ ಮುಂದೆ ಇರಿಸಿ ವರ್ತಿಸಿದರೆ ನೀವು ಸರಿಯಾದ ಸತ್ಯವಿಶ್ವಾಸಿಗಳಾಗುವಿರಿ. ನೀವು ಈ ಶರತ್ತುಗಳನ್ನು ಪಾಲಿಸಿ ನಡೆಯುವಿರಾದರೆ ನೀವು ನಿಮ್ಮ ವಿಶ್ವಾಸವನ್ನು ಸರಿಯಾಗಿ ಪರಿಶೋಧಿಸಲು ಸಾಧ್ಯವಾಗುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರತಿಯೊಬ್ಬ ಅಹ್ಮದಿಯಿಂದ ಬೈಅತ್ ಪ್ರತಿಜ್ಞೆ ಪಡೆದಿರುತ್ತಾರೆ. ಈ ಬೈಅತ್ ಪ್ರತಿಜ್ಞೆಯಲ್ಲಿ ಬೈಅತ್ ಶರತ್ತುಗಳನ್ನು ಅವರು ನಮ್ಮ ಮುಂದೆ ಇರಿಸಿ ನಮಗೆ ಕಾರ್ಯಕ್ರಮ ಸೂಚಿಯನ್ನೂ ನೀಡಿದ್ದಾರೆ. ನಾವು ಅದರ ಪ್ರಕಾರ ಕೆಲಸಮಾಡಬೇಕಾಗಿದೆ. ಪ್ರತಿಯೊಬ್ಬ ಅಹ್ಮದಿ, ಪ್ರತಿದಿನ,

ಪ್ರತಿವಾರ, ಪ್ರತಿ ತಿಂಗಳು, ಮತ್ತು ಪ್ರತಿವರ್ಷ ಪರಿಶೋಧನೆ ನಡೆಸುವನೆಂದು ಅವರು ಪ್ರತೀಕ್ಷೆಯನ್ನು ಮಾಡಿದ್ದಾರೆ.

ನಾವು ಈ ವರ್ಷದ ಕೊನೆಯ ರಾತ್ರಿ ಮತ್ತು ನವ ವರ್ಷಾರಂಭದಲ್ಲಿ ನಮ್ಮನ್ನು ಪರಿಶೋಧಿಸುತ್ತಾ ಪ್ರಾರ್ಥನೆ ಮಾಡುತ್ತಾ ಇದ್ದಲ್ಲಿ ನಾವು ನಮ್ಮ ಅಂತಿಮ ಗತಿಯನ್ನು ಸರಿಪಡಿಸುವವರಾಗುವೆವು. ಬದಲಾಗಿ ನಾವು ಸಹ ಬಾಹ್ಯವಾದ ಶುಭಾಶಯಗಳಿಂದ ಮತ್ತು ಲೌಕಿಕ ಚಟುವಟಿಕೆಗಳಿಂದ ಹೊಸ ವರ್ಷಾರಂಭ ಮಾಡುವುದಾದರೆ ನಾವು ಬಹಳ ಹೆಚ್ಚು ಕಳೆದು ಕೊಂಡರಾಗುವೆವು ಮತ್ತು ಏನನ್ನೂ ಗಳಿಸಲಾರೆವು ಅಥವಾ ಬಹಳ ಕಡಿಮೆ ಗಳಿಸುವವರಾಗುವೆವು. ನಮ್ಮಲ್ಲಿ ಬಲಹೀನತೆಗಳು ಬಾಕಿಯಾಗಿ ಉಳಿದಿದ್ದರೆ, ನಾವು ಮಾಡಿದ ಪರಿಶೋಧನೆಯಿಂದ ನಮಗೆ ತೃಪ್ತಿ ದೊರಕುವುದಿಲ್ಲವಾದರೆ, ಅಲ್ಲಾಹನು ನಮ್ಮ ಮುಂದಿನ ವರ್ಷವನ್ನು ಕಳೆದ ವರ್ಷದ ಹಾಗೆ ಆಧ್ಯಾತ್ಮಿಕ ಬಲಹೀನತೆ ಪ್ರಕಟಿಸುವ ವರ್ಷವಾಗದಂತೆ ಮಾಡಲಿ ಎಂದೂ ನಮ್ಮ ಪ್ರತಿಯೊಂದು ಹೆಜ್ಜೆ ಅಲ್ಲಾಹನ ಸಂಪ್ರೀತಿ ಗಳಿಸಲು ಹಾಕಿದ ಹೆಜ್ಜೆಯಾಗಲಿ ಎಂದೂ ಪ್ರಾರ್ಥಿಸಬೇಕಾಗಿದೆ. ನಮ್ಮ ಪ್ರತಿಯೊಂದು ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಜೀವಿತ ಮಾದರಿಯನ್ನು ಅನುಸರಿಸುವುದಾಗಲಿ. ನಮ್ಮ ಪ್ರತಿಯೊಂದು ಹಗಲು ರಾತ್ರಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನಾವು ಮಾಡಿದ ಬೈಅತ್ ಪ್ರತಿಜ್ಞೆ ಈಡೇರಿಸುವ ಕಡೆಗೆ ಒಯ್ಯುವುದು ಆಗಲಿ ಎಂದು ಪ್ರಾರ್ಥಿಸಬೇಕು. ಆ ಪ್ರತಿಜ್ಞೆಯು ನಮ್ಮೊಂದಿಗೆ ಈ ರೀತಿಯ ಪ್ರಶ್ನೆಗಳನ್ನು ಕೇಳುತ್ತದೆ: ಶಿರ್ಕ್ (ಬಹುದೇವಾರಾಧನೆ) ಮಾಡಲಾರೆವು ಎಂಬ ಪ್ರತಿಜ್ಞೆಯನ್ನು ನಾವು ಈಡೇರಿಸಿದ್ದೇವೆಯೇ? ಇಲ್ಲಿ ಶಿರ್ಕ್ (ಬಹುದೇವಾರಾಧನೆ) ಎಂದು ಹೇಳಿರುವುದು ವಿಗ್ರಹಗಳನ್ನೂ, ಸೂರ್ಯ ಚಂದ್ರರನ್ನೂ ಆರಾಧಿಸುವ ಶಿರ್ಕ್ ಬಗ್ಗೆ ಅಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಪ್ರಕಾರ, ಕೆಲಸಗಳಲ್ಲಿ ತೋರಿಕೆಯ ಮನೋಭಾವ ಶಿರ್ಕ್ ಆಗಿದೆ. ರಹಸ್ಯ ಆಶಾಭಿಲಾಷೆಗಳಲ್ಲಿ ಮುಳುಗಿರುವುದು ಶಿರ್ಕ್ ಆಗಿದೆ. ನಮ್ಮ ನಮಾಝ್, ನಮ್ಮ ಉಪವಾಸ, ನಾವು ಮಾಡಿದ ದಾನಧರ್ಮಗಳು, ನಮ್ಮ ಆರ್ಥಿಕ ತ್ಯಾಗಗಳು, ಜನರ ಸೇವೆ, ಜಮಾಅತಿನ ಕೆಲಸಗಳಿಗೆ ನಾವು ಸಮಯ ವಿನಿಯೋಗಿಸಿರುವುದು ಇವುಗಳೆಲ್ಲಾ ಅಲ್ಲಾಹನ ಸಂಪ್ರೀತಿಗಳಿಸಲಿಕ್ಕಾಗಿತ್ತೋ ಅಥವಾ ಅಲ್ಲಾಹನ ಹೊರತು ಬೇರೆ ಯಾರನ್ನಾದರೂ ಸಂತೋಷ ಪಡಿಸಲಿಕ್ಕಾಗಿತ್ತೋ ಅಥವಾ ಲೋಕದ ಜನರಿಗೆ ತೋರಿಸಲಿಕ್ಕೋಸ್ಕರವಾಗಿತ್ತೋ ಎಂದು ಪರಿಶೋಧಿಸಬೇಕು. ನಮ್ಮ ಹೃದಯದಲ್ಲಿ ರಹಸ್ಯವಾಗಿರಿಸಿರುವ ನಮ್ಮ ಆಶಾಭಿಲಾಷೆಗಳು ಅಲ್ಲಾಹನ ವಿರುದ್ಧವಾಗಿ ನಿಲ್ಲುವವುಗಳಾಗಿದ್ದುವೋ ಎಂದು ನೋಡಬೇಕು.

ಅನಂತರ ಈ ಪ್ರಶ್ನೆಗಳು. ನಾವು ಸುಳ್ಳು ಹೇಳುವುದರಿಂದ ಪೂರ್ಣವಾಗಿ ನಮ್ಮನ್ನು ರಕ್ಷಿಸಿಕೊಂಡು ಸತ್ಯವನ್ನು ಅವಲಂಬಿಸಿಕೊಂಡು ಕಳೆದ ವರ್ಷವನ್ನು ಕಳೆದೆವೋ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಧ್ಯಾತ್ಮಿಕ ಮಟ್ಟವನ್ನು ಹೀಗೆ ನಿಗದಿಪಡಿಸಿದ್ದಾರೆ: ಸತ್ಯ ಹೇಳುವುದನ್ನು ತಡೆಗಟ್ಟುವ ಸ್ವಾರ್ಥ ಉದ್ದೇಶಲಕ್ಷ್ಯಗಳಿಂದ ದೂರಸರಿಯುವ ತನಕ ವಾಸ್ತವಿಕವಾಗಿ ಒಬ್ಬನು ಸತ್ಯ ಹೇಳುವವನು ಎಂದೆನಿಸಲಾರನು. ತನ್ನ ಜೀವಕ್ಕೆ, ಸಂಪತ್ತಿಗೆ ಮತ್ತು ಗೌರವಕ್ಕೆ ಸತ್ಯ ಹೇಳುವುದರಿಂದ ಹಾನಿ ಸಂಭವಿಸಬಹುದಾದ ಸಂದರ್ಭವೇ ಸತ್ಯವನ್ನು ಹೇಳಬೇಕಾದ ಮಹತ್ವಪೂರ್ಣ ಸಂದರ್ಭವಾಗಿದೆ.

ಇನ್ನೊಂದು ಪ್ರಶ್ನೆ, ಕೊಳಕು ಯೋಚನೆಗಳು ಹುಟ್ಟುವಂತೆ ಮಾಡುವ ಚಟುವಟಿಕೆಗಳಿಂದ ನಾವು ನಮ್ಮನ್ನು ದೂರವಿರಿಸಿದ್ದೇವೆಯೋ? ಎಂದರೆ ಈ ಕಾಲಘಟ್ಟದಲ್ಲಿ ಟಿ.ವಿ. ಮತ್ತು ಇಂಟರ್‌ನೆಟ್ ಇಂತಹವುಗಳಾಗಿವೆ. ಅವುಗಳಲ್ಲಿ ಯೋಚನೆಗಳನ್ನು ಹಾಳುಗೆಡಹುವ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ನಾವು ಅವುಗಳಿಂದ ನಮ್ಮನ್ನು ರಕ್ಷಿಸಿಕೊಂಡಿದ್ದೇವೆಯೇ? ನಾವು ಅವುಗಳ ಮೂಲಕ ಅಶ್ಲೀಲ ಚಲನಚ್ಚಿತ್ರಗಳನ್ನೂ ಕಾರ್ಯಕ್ರಮಗಳನ್ನೂ ನೋಡುವವರಾಗಿದ್ದರೆ ನಾವು ಬೈಅತ್ ಪ್ರತಿಜ್ಞೆಯಿಂದ ದೂರ ಸರಿದಿದ್ದೇವೆ ಮತ್ತು ನಮ್ಮ ಸ್ಥಿತಿ ಚಿಂತಾರ್ಹವಾಗಿದೆ. ಏಕೆಂದರೆ ಇಂತಹವುಗಳು ಒಂದು ರೀತಿಯ ವ್ಯಭಿಚಾರದ ಕಡೆಗೆ ಒಯ್ಯುವವುಗಳಾಗಿವೆ.

ಇನ್ನೊಂದು ಪ್ರಶ್ನೆ, ಏನು ನಾವು ನಮ್ಮನ್ನು ದುರ್ನೋಟದಿಂದ ರಕ್ಷಿಸಿಕೊಳ್ಳಲು ಸಾಧ್ಯವಿರುವ ಪ್ರಯತ್ನ ಮಾಡಿದ್ದೇವೆಯೇ? ದುರ್ನೋಟದಿಂದ ರಕ್ಷಿಸಿಕೊಳ್ಳಬೇಕು ಎಂಬ ಆಜ್ಞೆ ಪುರುಷರಿಗೂ ಮಹಿಳೆಯರಿಗೂ ಅನ್ವಯಿಸುವುದಾಗಿದೆ. ತೆರೆದ ದೃಷ್ಟಿಯಿಂದ ನೋಡುವುದರಿಂದ ಅನೇಕ ಸಾಧ್ಯತೆಗಳು ಸಂಭವಿಸುತ್ತವೆ. ಆದುದರಿಂದ ದೃಷ್ಟಿಯನ್ನು ತಗ್ಗಿಸಿಡಿರಿ.

ಇನ್ನೊಂದು ಪ್ರಶ್ನೆ, ನಾವು ಫಿಸ್ಖ್ ಮತ್ತು ಫುಜೂರ್‌ಗೆ ಸಂಬಂಧಿಸಿದ ಪ್ರತಿಯೊಂದು ವಿಷಯದಿಂದ ಈ ಕಳೆದ ವರ್ಷ ನಮ್ಮನ್ನು ರಕ್ಷಿಸಲು ಪ್ರಯತ್ನಿಸಿದ್ದೇವೆಯೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಸತ್ಯವಿಶ್ವಾಸಿಯನ್ನು ಬೈಯ್ಯುವುದು ಫಿಸ್ಖ್ ಆಗಿದೆ. ಕಠಿಣವಾಗಿ ಜಗಳವಾಗುವಾಗ ಕಠಿಣ ಶಬ್ದಗಳು ಬಳಸಲ್ಪಡುತ್ತವೆ. ಕೆಟ್ಟ ಮಾತುಗಳು ಹೇಳಲಾಗುತ್ತವೆ. ಒಬ್ಬ ಸತ್ಯವಿಶ್ವಾಸಿ ಇನ್ನೊಬ್ಬ ಸತ್ಯವಿಶ್ವಾಸಿಯ ವಿರುದ್ಧ ಹೀಗೆ ಮಾಡುವುದು ಫಿಸ್ಖ್ ಆಗಿದೆ. ಬೇರೆ ಯಾರೊಂದಿಗಾದರೂ ಮಾಡಿದರೆ ಸಹ ಅದು ಫಿಸ್ಖ್ ಆಗಿದೆ.

ನಾವು ನಮ್ಮನ್ನು ಕೇಳಬೇಕಾದ ಇನ್ನೊಂದು ಪ್ರಶ್ನೆ, ಪ್ರತಿಯೊಂದು ದೌರ್ಜನ್ಯ ಮಾಡುವುದರಿಂದ ನಾವು ನಮ್ಮನ್ನು ರಕ್ಷಿಸಿದ್ದೇವೆಯೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಯಾರದಾದರೂ ಒಂದು ಗೇಣು ಅಳತೆಯ ಭೂಮಿ ಅಪಹರಿಸುವುದು, ಒಬ್ಬನ ಒಂದು ಕಲ್ಲು ಸಹ ತಪ್ಪು ರೀತಿಯಲ್ಲಿ ತೆಗೆದುಕೊಳ್ಳುವುದು ದೌರ್ಜನ್ಯ ಕೃತ್ಯವಾಗಿದೆ. ಇನ್ನೊಂದು ಪ್ರಶ್ನೆ, ಏನು ನಾವು ನಮ್ಮನ್ನು ಪ್ರತಿಯೊಂದು ರೀತಿಯ ವಂಚನೆಯಿಂದ ರಕ್ಷಿಸಿಕೊಂಡಿದ್ದೇವೆಯೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ನಿಮಗೆ ಯಾರಾದರೂ ವಂಚನೆ ಮಾಡಿದರೆ ಸಹ ನೀವು ಅವರನ್ನು ವಂಚಿಸಬಾರದು. ನಾವು ಕೇಳಬೇಕಾದ ಇನ್ನೊಂದು ಪ್ರಶ್ನೆ, ಏನು ನಾವು ಎಲ್ಲ ರೀತಿಯ ಗಲಬೆ ಗೊಂದಲಗಳಿಂದ ರಕ್ಷಿಸಿಕೊಳ್ಳಲು ಪ್ರಯತ್ನ ಮಾಡಿದ್ದೇವೆಯೇ? ಇನ್ನೊಂದು ಪ್ರಶ್ನೆ, ನಾವು ಪ್ರತಿಯೊಂದು ರೀತಿಯ ವಿದ್ರೋಹಕರ ಕೃತ್ಯಗಳಿಂದ

ನಮ್ಮನ್ನು ರಕ್ಷಿಸಿಕೊಂಡಿದ್ದೇವೆಯೇ? ಇನ್ನೊಂದು ಪ್ರಶ್ನೆ, ಏನು ನಾವು ಇಂದ್ರಿಯಾಸಕ್ತಿಯಿಂದ ಸೋಲಿಸಲ್ಪಟ್ಟಿದ್ದೇವೆಯೇ? ಇಂದಿನ ಕಾಲದಲ್ಲಿ ಪ್ರತಿಯೊಂದು ದಿಕ್ಕಿನಲ್ಲಿ ನಿರ್ಲಜ್ಜೆ ಹಬ್ಬಿರುವಾಗ ಇಂದ್ರಿಯಾಸಕ್ತಿಯಿಂದ ರಕ್ಷಣೆ ಪಡೆದುಕೊಳ್ಳುವುದು ಸಹ ಒಂದು ಜಿಹಾದ್ ಆಗಿದೆ.

ಅನಂತರ ನಾವು ನಮ್ಮೊಡನೆ ಕೇಳಬೇಕಾದ ಪ್ರಶ್ನೆ, ಏನು ನಾವು ಐದು ಹೊತ್ತಿನ ನಮಾಝ್ ಕ್ರಮ ಪ್ರಕಾರ ಅನುಷ್ಠಿಸುತ್ತಿರುವೆವೋ? ವರ್ಷವಿಡೀ ಕ್ರಮಬದ್ಧವಾಗಿ ನಮಾಝ್ ಅನುಷ್ಠಿಸಿದ್ದೇವೆಯೇ? ಇದರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಅನೇಕ ಸ್ಥಳಗಳಲ್ಲಿ ಪ್ರಸ್ತಾಪಿಸಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ನಮಾಝನ್ನು ಬಿಟ್ಟುಬಿಡುವುದು ಮನುಷ್ಯನನ್ನು ಶಿರ್ಕ್ ಮತ್ತು ಅವಿಶ್ವಾಸಕ್ಕೆ ಸಮೀಪಗೊಳಿಸುತ್ತದೆ ಎಂದು. ಇನ್ನೊಂದು ಪ್ರಶ್ನೆ, ತಹಜ್ಜುದ್ ನಮಾಝ್ ಅನುಷ್ಠಿಸಲು ನಾವು ಲಕ್ಷ್ಯ ನೀಡಿರುವೆವೋ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇದರ ಬಗ್ಗೆ ಹೀಗೆ ಹೇಳಿದ್ದಾರೆ: ತಹಜ್ಜುದ್ ನಮಾಝ್ ಅನುಷ್ಠಿಸಿರಿ. ಅದನ್ನು ನಿರಂತರವಾಗಿ ಅನುಷ್ಠಿಸುವಂತೆ ಪ್ರಯತ್ನಿಸಿರಿ ಎಂದು. ಇದು ಸಾತ್ವಿಕರ ರೀತಿಯಾಗಿದೆ. ಇದು ಅಲ್ಲಾಹನ ಸಾಮೀಪ್ಯಗಳಿಸುವ ಮಾರ್ಗವಾಗಿದೆ. ಇದನ್ನು ಅನುಷ್ಠಿಸುತ್ತಾ ಇರುವುದು ಪಾಪಕೃತ್ಯಗಳಿಂದ ತಡೆಯುತ್ತದೆ, ಕೆಡುಕನ್ನು ಕೊನೆಗೊಳಿಸುತ್ತದೆ. ಶಾರೀರಿಕ ರೋಗಗಳಿಂದಲೂ ಅದು ನಮ್ಮನ್ನು ರಕ್ಷಿಸುತ್ತದೆ. ನಾವು ಕೇಳಬೇಕಾದ ಇನ್ನೊಂದು ಪ್ರಶ್ನೆ, ಏನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಪ್ರಾರ್ಥನೆ ಅರ್ಪಿಸುವ ನಿತ್ಯ ಪ್ರಯತ್ನ ನಾವು ಮಾಡಿದ್ದೇವೆಯೇ? ಇದು ಅಲ್ಲಾಹನ ವಿಶಿಷ್ಟ ಆಜ್ಞೆಗಳಲ್ಲಿ ಒಂದಾಗಿದೆ. ಇದು ಸತ್ಯವಿಶ್ವಾಸಿಗಳಿಗೆ ಪ್ರಾರ್ಥನೆಗಳು ಅಂಗೀಕಾರ ಪಡೆಯುವ ಒಂದು ಮಾರ್ಗವೂ ಆಗಿದೆ.

ಇನ್ನೊಂದು ಪ್ರಶ್ನೆ, ಏನು ನಾವು ನಿತ್ಯ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಿದ್ದೇವೆಯೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವರು, ಯಾವ ವ್ಯಕ್ತಿ ಇಸ್ತಿಗ್‌ಫಾರ್ ಪ್ರಾರ್ಥನೆಗೆ ಅಂಟಿಕೊಂಡಿರುತ್ತಾನೋ ಅಲ್ಲಾಹನು ಅವನಿಗೆ ಪ್ರತಿಯೊಂದು ಕಷ್ಟದಿಂದ ಹೊರಗೆ ಬರುವ ಮಾರ್ಗ ತೋರಿಸುವನು. ಪ್ರತಿಯೊಂದು ಕಷ್ಟದಿಂದ ಸುಖದ ಮಾರ್ಗ ಸೃಷ್ಟಿಸುವನು. ಅವನು ಊಹಿಸದ ಮಾರ್ಗದ ಮೂಲಕ ಅವನಿಗೆ ಆಹಾರ ತಲುಪಿಸುವನು.

ಇನ್ನೊಂದು ಪ್ರಶ್ನೆ, ಅಲ್ಲಾಹನನ್ನು ಸ್ತುತಿಸುವ ಕಡೆಗೆ ನಾವು ಗಮನ ಹರಿಸಿದ್ದೇವೆಯೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ– ಅಲ್ಲಾಹನನ್ನು ಸ್ತುತಿಸದೆ ಪ್ರಾರಂಭಿಸಲಾದ ಕೆಲಸ ನ್ಯೂನತೆ ಭರಿತವಾಗಿರುತ್ತದೆ. ಅನುಗ್ರಹ ರಹಿತವಾಗಿರುತ್ತದೆ. ಹಾಗೂ ಅವು ಏನೂ ಪ್ರಭಾವ ಬೀರಲಾರವು ಎಂದು. ಇನ್ನೊಂದು ಪ್ರಶ್ನೆ, ಏನು ನಾವು ನಮ್ಮವರಲ್ಲಿ ಮತ್ತು ಅನ್ಯರಲ್ಲಿ ಎಲ್ಲರಿಗೂ ಯಾವುದೇ ರೀತಿಯ ಕಷ್ಟವುಂಟುಮಾಡುವುದರಿಂದ ನಾವು ಹಿಂದೆ ಸರಿದಿರುವೆವೋ? ಏನು ನಮ್ಮ ನಾಲಗೆಗಳು ಮತ್ತು ಕೈಗಳು ಅನ್ಯರಿಗೆ ಕಷ್ಟ ನೀಡುವುದರಿಂದ ರಕ್ಷಿಸಲ್ಪಟ್ಟಿವೆಯೇ? ಏನು ನಾವು ಕ್ಷಮೆ ನೀಡಿದ್ದೇವೆಯೇ, ಸಹನೆ ದೋರಿದ್ದೇವೆಯೇ? ವಿನಯ ಮತ್ತು ಸೌಮ್ಯತೆ ನಮ್ಮ ವೈಶಿಷ್ಟ್ಯವಾಗಿದೆಯೇ? ಸಂತೋಷ, ದುಃಖ, ಸುಖ ಮತ್ತು ಕಷ್ಟಗಳ ಪ್ರತಿಯೊಂದು ಸ್ಥಿತಿಯಲ್ಲಿಯೂ ನಾವು ಅಲ್ಲಾಹನಿಗೆ ನಿಷ್ಠಾವಂತರಾಗಿರುವೆವೋ? ನನ್ನ ಪ್ರಾರ್ಥನೆ ಏಕೆ ಅಂಗೀಕರಿಸಲ್ಪಡಲಿಲ್ಲ ಅಥವಾ ನನ್ನನ್ನು ಈ ಕಷ್ಟಕ್ಕೀಡಾಗಿಸಿದುದು ಏಕೆ ಎಂದು ಎಂದಾದರೂ ಅಲ್ಲಾಹನ ಮೇಲೆ ಆಕ್ಷೇಪವೆತ್ತಿದ್ದೇವೆಯೇ? ಇನ್ನೊಂದು ಪ್ರಶ್ನೆ, ಪ್ರತಿಯೊಂದು ರೀತಿಯ ಅನಾಚಾರ ಮತ್ತು ದುರಾಚಾರಗಳಿಂದ ನಮ್ಮನ್ನು ಪೂರ್ಣ ರಕ್ಷಿಸಿಕೊಂಡಿರುವೆವೋ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ದುರಾಚಾರಗಳು ಮತ್ತು ನವೀನಾಚಾರಗಳು ನಿಮ್ಮನ್ನು ಪಥಭ್ರಷ್ಟತೆಗೆ ಒಯ್ಯುವುದು, ಅದರಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ ಎಂದು.

ಇನ್ನೊಂದು ಪ್ರಶ್ನೆ, ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗಳನ್ನೂ ಉಪದೇಶಗಳನ್ನೂ ಪೂರ್ಣವಾಗಿ ಅನುಸರಿಸಲು ಪ್ರಯತ್ನ ಮಾಡುತ್ತಾ ಇದ್ದೇವೆಯೇ? ಇನ್ನೊಂದು ಪ್ರಶ್ನೆ, ದುರಹಂಕಾರ ಮತ್ತು ಅಹಂಭಾವವನ್ನು ನಾವು ಪೂರ್ಣವಾಗಿ ಬಿಟ್ಟಿದ್ದೇವೆಯೋ? ಅಥವಾ ಅದನ್ನು ಬಿಡಲು ಪ್ರಯತ್ನ ಮಾಡಿದ್ದೇವೆಯೋ? ಶಿರ್ಕ್ ನಂತರ ಎಲ್ಲದಕ್ಕಿಂತ ದೊಡ್ಡ ಕೆಡುಕು ದುರಹಂಕಾರ ಮತ್ತು ಹೆಮ್ಮೆ ತೋರಿಸುವಿಕೆ ಆಗಿದೆ. ಮತ್ತೊಂದು ಪ್ರಶ್ನೆ, ಏನು ನಾವು ಸುಸ್ವಭಾವದ ಉನ್ನತ ಮಟ್ಟವನ್ನು ತಲಪಲು ಪ್ರಯತ್ನ ಮಾಡಿರುವೆವೋ? ನಾವು ಮೃದುತ್ವ ಮತ್ತು ನಿರಾಡಂಬರತೆಯನ್ನು ಹೊಂದಲು ಪ್ರಯತ್ನ ಮಾಡಿರುವೆವೋ?

ಇನ್ನೊಂದು ಪ್ರಶ್ನೆ, ಪ್ರತಿದಿನ ಧರ್ಮ ಕಾರ್ಯದಲ್ಲಿ ಮುಂದುವರಿಯುವ ಅಭಿರುಚಿ ಮತ್ತು ಧರ್ಮದ ಗೌರವ ಮತ್ತು ಘನತೆ ಕಾಪಾಡಲು ಅಭಿಲಾಷೆ ನಮ್ಮಲ್ಲಿ ಪ್ರತಿದಿನ ಹುಟ್ಟುತ್ತಿದೆಯೇ? ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆವು ಎಂಬ ಪ್ರತಿಜ್ಞೆ ನಾವು ಬಹಳ ಸಾರಿ ಪುನರಾವರ್ತಿಸುತ್ತೇವೆ. ಇದು ಕೇವಲ ಪೊಳ್ಳು ಪ್ರತಿಜ್ಞೆಯಾಗದಂತೆ ಪ್ರಯತ್ನಿಸಿದ್ದೇವೆಯೇ? ಇನ್ನೊಂದು ಪ್ರಶ್ನೆ, ಇಸ್ಲಾಮಿನ ಬಗ್ಗೆ ನಮ್ಮ ಪ್ರೇಮ, ಅದರಲ್ಲಿ ನಾವು ಅಭಿವೃದ್ಧಿಗಳಿಸಲು ಪ್ರಯತ್ನಿಸಿ ಅದಕ್ಕೆ ನಮ್ಮ ಸಂಪತ್ತಿಗಿಂತ ಮೇಲಿನ ಸ್ಥಾನ ನೀಡಲು, ನಮ್ಮ ಗೌರವಕ್ಕಿಂತ ಮೇಲಿನ ಸ್ಥಾನ ನೀಡಲು ಮತ್ತು ಅದನ್ನು ನಮ್ಮ ಮಕ್ಕಳಿಗಿಂತ ಹೆಚ್ಚು ಪ್ರೀತಿಸಲು ಪ್ರಯತ್ನ ಮಾಡಿರುವೆವೋ? ಇನ್ನೊಂದು ಪ್ರಶ್ನೆ, ನಾವು ಅಲ್ಲಾಹನ ಸೃಷ್ಟಿಗಳಿಗೆ ಸಹಾನುಭೂತಿ ತೋರಿಸುವುದರಲ್ಲಿ ಮುಂದೆ ಸಾಗಲು ಪ್ರಯತ್ನ ಮಾಡಿರುವೆವೋ? ಪ್ರಯತ್ನ ಮಾಡುತ್ತಿರುವೆವೋ? ನಾವು ನಮ್ಮ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಅಲ್ಲಾಹನ ಸೃಷ್ಟಿಗಳಿಗೆ ಪ್ರಯೋಜನ ತಲಪಿಸಲು ಪ್ರಯತ್ನ ಮಾಡುತ್ತಿದ್ದೇವೆಯೇ?

ನಾವು ಪ್ರಾರ್ಥನೆ ಮಾಡುತ್ತಾ ಇದ್ದು ನಮ್ಮ ಮಕ್ಕಳಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅನುಸರಿಸುವ ಉನ್ನತ ಮಟ್ಟ ಕಾಪಾಡಲು ಉಪದೇಶಿಸುತ್ತಾ ಇದ್ದೇವೆಯೇ? ಇನ್ನೊಂದು ಪ್ರಶ್ನೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನಮ್ಮ ಭ್ರಾತೃತ್ವದ

ಮತ್ತು ಅನುಸರಣೆಯ ಸಂಬಂಧವನ್ನು ಇತರ ಎಲ್ಲ ಲೌಕಿಕ ಸಂಬಂಧಗಳಿಗಿಂತ ಮಿಗಿಲಾಗಿ ನಾವು ಪರಿಗಣಿಸಿದ್ದೇವೆಯೇ? ಇನ್ನೊಂದು ಪ್ರಶ್ನೆ, ಅಹ್ಮದಿಯಾ ಖಿಲಾಫತ್‌ನೊಂದಿಗೆ ನಿಷ್ಠೆ ಮತ್ತು ಅನುಸರಣೆ ವರ್ಧಿಸಲು ನಾವು ವರ್ಷವಿಡೀ ಪ್ರಾರ್ಥಿಸಿದ್ದೇವೆಯೇ? ನಮ್ಮ ಮಕ್ಕಳು ಖಿಲಾಫತ್‌ನೊಂದಿಗೆ ಸಂಬಂಧ ಸ್ಥಾಪಿಸಲು ನಿಷ್ಠೆಯನ್ನು ಹೊಂದಲು ಅವರಿಗೆ ಉಪದೇಶ ನೀಡುತ್ತಾ ಇದ್ದೆವೋ ಮತ್ತು ಅವರಲ್ಲಿ ಖಿಲಾಫತ್ ಬಗ್ಗೆ ನಿಷ್ಠೆ ಉಂಟಾಗಲು ಪ್ರಾರ್ಥನೆ ಮಾಡುತ್ತಾ ಇದ್ದೆವೋ? ಆಯಾಕಾಲದ ಖಲೀಫರಿಗೋಸ್ಕರ ಮತ್ತು ಜಮಾಅತಿಗೋಸ್ಕರ ನಾವು ಸದಾ ಪ್ರಾರ್ಥನೆ ಮಾಡುತ್ತಾ ಇದ್ದೆವೋ?

ಈ ಪ್ರಶ್ನೆಗಳಲ್ಲಿ ಬಹು ಸಂಖ್ಯೆಯ ಪ್ರಶ್ನೆಗಳಿಗೆ ಸಕಾರಾತ್ಮಕ ಉತ್ತರ ನೀಡುವ ರೀತಿಯಲ್ಲಿ ಈ ಕಳೆದ ವರ್ಷ ದಾಟಿ ಹೋಗಿದ್ದರೆ ಸ್ವಲ್ಪ ನ್ಯೂನತೆಗಳಿದ್ದರೂ ನಾವು ಬಹಳ ಗಳಿಸಿದ್ದೇವೆ ಎಂದಾಗುತ್ತದೆ. ಆದರೆ ನಾನು ಕೇಳಿದ ಪ್ರಶ್ನೆಗಳಲ್ಲಿ ಹೆಚ್ಚಿನವುಗಳಿಗೆ ನಕಾರಾತ್ಮಕ ಉತ್ತರ ಲಭಿಸುವುದಿದ್ದರೆ, ಅದು ಚಿಂತಾರ್ಹವಾಗಿದೆ. ನಾವು ನಮ್ಮ ಸ್ಥಿತಿಯ ಬಗ್ಗೆ ಯೋಚಿಸಬೇಕು. ಇದಕ್ಕೆ ಪರಿಹಾರ ಮಾರ್ಗವೇನೆಂದರೆ ಇಂದಿನ ರಾತ್ರಿ ಮತ್ತು ನಾಳಿನ ಕೊನೆಯ ರಾತ್ರಿ, ದೃಢ ನಿರ್ಧಾರ ಮಾಡಬೇಕು ಮತ್ತು ಪ್ರತಿಜ್ಞೆ ಮಾಡಬೇಕು. ಹೊಸ ವರ್ಷದ ಆರಂಭದಲ್ಲಿ ಪ್ರಾರ್ಥಿಸಬೇಕು. ಅಲ್ಲಾಹನು ಕಳೆದ ವರ್ಷದ ನಮ್ಮ ಕುಂದುಕೊರತೆಗಳನ್ನು ಕ್ಷಮಿಸಲಿ ಎಂದೂ ಹೊಸ ವರ್ಷದಲ್ಲಿ ಬಹಳ ಹೆಚ್ಚು ಅನುಗ್ರಹಗಳಿಸಲು ಭಾಗ್ಯ ನೀಡಲಿ ಎಂದು ಪ್ರಾರ್ಥಿಸಬೇಕು. ನಾವು ಕಳೆದುಕೊಳ್ಳುವವರಾಗಬಾರದೆಂದೂ ಅಲ್ಲಾಹನ ಸಂಪ್ರೀತಿ ಗಳಿಸಲು ತಮ್ಮ ಎಲ್ಲವನ್ನೂ ಬಲಿದಾನ ನೀಡಲು ಸಿದ್ಧರಾದ ಸತ್ಯ ವಿಶ್ವಾಸಿಗಳೊಂದಿಗೆ ಸೇರುವವರಾಗಬೇಕೆಂದೂ ಪ್ರಾರ್ಥಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಒಂದು ವಿಜ್ಞಾಪನೆಯಲ್ಲಿ ಹೀಗೆ ಬರೆದಿರುವರು: "ಇಲ್ಲಿ ಹಾಜರಾಗಿರುವ ಮತ್ತು ತಮ್ಮ ಊರಿನಲ್ಲಿ ವಾಸವಿರುವ ನನ್ನ ಜಮಾಅತಿಗೆ ಸೇರಿದ ಎಲ್ಲರಿಗೂ ನಾನು ನೀಡುವ ಉಪದೇಶ ಇದಾಗಿದೆ. ಈ ಉಪದೇಶವನ್ನು ಲಕ್ಷ್ಯವಿಟ್ಟು ಆಲಿಸಿರಿ. ಈ ಜಮಾಅತಿಗೆ ಸೇರಿ ನನ್ನೊಂದಿಗೆ ನಿಷ್ಠೆಯ ಮತ್ತು ಶಿಷ್ಯತ್ವದ ಸಂಬಂಧ ಹೊಂದಿದವರೊಂದಿಗೆ ನನ್ನ ಉಪದೇಶವೇನೆಂದರೆ ಅವರು ಒಳ್ಳೆಯ ನಡತೆ, ಒಳ್ಳೆಯ ಸ್ವಭಾವ ಮತ್ತು ತಖ್ವದ ಉನ್ನತ ಮಟ್ಟವನ್ನು ತಲಪಬೇಕು. ಯಾವುದೇ ರೀತಿಯ ಗಲಬೆಗೊಂದಲಗಳು, ಉದ್ಧಟಕೃತ್ಯಗಳು, ದುರ್ನಡತೆ, ಅವರ ಸಮೀಪಕ್ಕೆ ಬರಲು ಸಾಧ್ಯವಾಗದಿರಬೇಕು. ಅವರು ಐದು ಹೊತ್ತಿನ ಬಾಜಮಾಅತ್ ನಮಾಝ್ ಅನುಷ್ಠಿಸುವವರಾಗಬೇಕು. ಅವರು ಸುಳ್ಳು ಹೇಳಬಾರದು. ಅವರು ಯಾರಿಗೂ ನಾಲಗೆಯಿಂದ ನೋವುಂಟುಮಾಡಬಾರದು. ಯಾವುದೇ ಕೆಟ್ಟ ಕೆಲಸಮಾಡಬಾರದು. ಯಾವುದೇ ರೀತಿಯ ಉದ್ಧಟಕೃತ್ಯ, ದೌರ್ಜನ್ಯ, ಅಸ್ತವ್ಯಸ್ತತೆ ಮತ್ತು ಹಿಂಸಾಚಾರದ ಯೋಚನೆ ಸಹ ಅವರಲ್ಲಿರಬಾರದು. ಅವರು ಎಲ್ಲ ವಿಧಗಳ ಪಾಪಕೃತ್ಯಗಳಿಂದಲೂ, ಅಪರಾಧಗಳಿಂದಲೂ, ಮಾಡಬಾರದ ಕೆಲಸದಿಂದಲೂ ಹೇಳಬಾರದ ಮಾತುಗಳಿಂದಲೂ ಮತ್ತು ಎಲ್ಲ ಇಂದ್ರಿಯಾಸಕ್ತಿಗಳಿಂದಲೂ ಅನಾವಶ್ಯಕ ಕೆಲಸಗಳಿಂದಲೂ ದೂರ ಸರಿದವರಾಗಬೇಕು. ಅವರು ಎಲ್ಲಾ ರೀತಿಯ ಪಾಪ ಕೃತ್ಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕು. ಅವರು ಅಲ್ಲಾಹನ ಪರಿಶುದ್ಧ ಹೃದಯಿಗಳಾದ, ನಿರುಪದ್ರವಿಗಳಾದ ಸೌಮ್ಯ ಮನೋಭಾವದ ದಾಸರಾಗಬೇಕು. ಯಾವುದೇ ವಿಷ ಪದಾರ್ಥ ಅವರಲ್ಲಿ ಬಾಕಿ ಉಳಿಯಬಾರದು. ಎಲ್ಲಾ ಮನುಷ್ಯರ ಬಗ್ಗೆ ಸಹಾನುಭೂತಿ ಅವರ ತತ್ವವಾಗಿರಬೇಕು. ಸತ್ಯವಿಶ್ವಾಸಿಯಾದವನು ಸತ್ಯವಿಶ್ವಾಸಿಗೆ ಸಹಾನುಭೂತಿ ತೋರಿಸುವವನಾದರೆ ಸಾಕಾಗಲಾರದು. ಎಲ್ಲಾ ಮನುಷ್ಯರಿಗೆ ಸಹಾನುಭೂತಿ ತೋರಿಸುವುದು ಅವರ ತತ್ವವಾಗಬೇಕು. ಅವರು ಅಲ್ಲಾಹನಿಗೆ ಭಯಪಡಬೇಕು. ತಮ್ಮ ನಾಲಗೆಯನ್ನೂ ಕೈಗಳನ್ನೂ ಮತ್ತು ಹೃದಯದ ಯೋಚನೆಗಳನ್ನೂ ಪ್ರತಿಯೊಂದು ಕೊಳಕು ಮತ್ತು ಹಿಂಸಾಚಾರ ಪ್ರಚೋದಕ ವಿಧಾನಗಳಿಂದ ಮತ್ತು ವಂಚನೆಯಿಂದ ರಕ್ಷಿಸಬೇಕು. ಅವರು ಐದು ಹೊತ್ತಿನ ನಮಾಝ್ ಅತ್ಯಂತ ಕ್ರಮಬದ್ಧವಾಗಿ ಅನುಷ್ಠಿಸಬೇಕು. ದೌರ್ಜನ್ಯ, ಧನಾಪಹಾರ, ಲಂಚ, ಹಕ್ಕುಗಳನ್ನು ಕಸಿಯುವುದು, ಪಕ್ಷಪಾತ, ಇವುಗಳಿಂದ ದೂರವಿರಬೇಕು. ಕೆಟ್ಟವರ ಸಹವಾಸದಲ್ಲಿರಬಾರದು. ಸತ್ಯವಿಶ್ವಾಸಿಗಳೊಂದಿಗೆ ಬೆರೆತಿರುವ ಓರ್ವ ವ್ಯಕ್ತಿ, ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವನಲ್ಲವಾದರೆ, ಜನರ ಹಕ್ಕುಗಳ ಬಗ್ಗೆ ಕಾಳಜಿ ವಹಿಸದವನಾಗಿದ್ದರೆ, ದೌರ್ಜನ್ಯ ಮನೋಭಾವದವನೂ ಕೆಟ್ಟ ನಡತೆಯವನೂ ಆಗಿದ್ದರೆ, ಅಥವಾ ನೀವು ಯಾರನ್ನು ಬೈಅತ್ ಮಾಡಿರುವಿರೋ ಆ ವ್ಯಕ್ತಿಯ ಬಗ್ಗೆ ಕೆಟ್ಟ ಮಾತುಗಳನ್ನು ಹೇಳುತ್ತಾ ಬೈಯ್ಯುತ್ತಾ ಇರುವವನಾದರೆ, ಸುಳ್ಳು ಸೃಜಿಸಿ ಅಲ್ಲಾಹನ ದಾಸರನ್ನು ಮೋಸಕ್ಕೊಳಪಡಿಸಲು ಪ್ರಯತ್ನಿಸುತ್ತನಾದರೆ ಅಂತಹ ಕೆಟ್ಟವನನ್ನು ನಿಮ್ಮ ಮಧ್ಯದಿಂದ ದೂರಸರಿಸುವುದು ಕಡ್ಡಾಯವಾಗಿದೆ. ಅಪಾಯಕಾರಿಯಾದ ಮನುಷ್ಯನಿಂದ ದೂರ ಸರಿಯಬೇಕಾಗಿದೆ."

"ನನ್ನ ಜಮಾಅತಿಗೆ ಸೇರಿದ ಎಲ್ಲರೂ ಈ ಉಪದೇಶ ಪ್ರಕಾರ ವರ್ತಿಸುವುದು ಕಡ್ಡಾಯವಾಗಿದೆ. ನಿಮ್ಮ ಸಭೆಗಳಲ್ಲಿ ಅಸಭ್ಯತೆಯಾಗಲಿ, ಅಪಹಾಸ್ಯವಾಗಲಿ, ನಗುವಾಗಲಿ ಇರಬಾರದು. ಒಳ್ಳೆಯ ಹೃದಯ, ಪರಿಶುದ್ಧ ಪ್ರಕೃತಿ, ಪರಿಶುದ್ಧ ಯೋಚನೆ ಹೊಂದಿ ಭೂಮಿಯಲ್ಲಿ ನಡೆಯಿರಿ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಉಪದೇಶ ಮತ್ತು ಎಚ್ಚರಿಕೆಯನ್ನು ನಮ್ಮ ಮುಂದೆ ಇರಿಸಿ ನಾವು ಜೀವಿಸುವವರಾಗುವಂತೆ ಅಲ್ಲಾಹನು ಮಾಡಲಿ. ನಾವು ಮಾಡಿದ ಬೈಅತ್ ಪ್ರತಿಜ್ಞೆ ನಾವು ಈಡೇರಿಸುವವರಾಗಲಿ. ನಮ್ಮ ಜೀವಿತ ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರವಾಗಲಿ. ನಾವು ನಮ್ಮ ಜೀವಿತವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಚ್ಛೆಗೆ ಅನುಸಾರವಾಗಿ ರೂಪಿಸಿ ನಮ್ಮ ಜೀವಿತದ ಉತ್ತಮ ಮಾದರಿ ಜನರ ಮುಂದೆ ಪ್ರಕಟಿಸುವವರಾಗೋಣ. ಅಲ್ಲಾಹನು ನಮ್ಮ ನ್ಯೂನತೆಗಳನ್ನು ಕಡೆಗಣಿಸಿ ನಮಗೆ ಬಹುಮಾನಗಳನ್ನು ನೀಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಅಲ್ಲಾಹನು ವಿಧಿಸಿರುವ ವಿಜಯಗಳನ್ನು ನಮಗೆ ತೋರಿಸುವವನಾಗಲಿ. ಹೊಸದಾಗಿ ಆರಂಭವಾಗುವ ವರ್ಷ ಅನುಗ್ರಹಗಳನ್ನು ತರುವುದಾಗಲಿ. ಶತ್ರುಗಳ ಕುತಂತ್ರಗಳು

ನಿಷ್ಫಲವಾಗಲಿ. ಅವರು ಜಮಾಅತಿನ ವಿರುದ್ಧ ಯೋಜನೆಗಳನ್ನು ತಯಾರಿಸುತ್ತಾ ಇದ್ದಾರೆ. ಈ ವರ್ಷ ಪಾಕಿಸ್ಥಾನದ ಅಹ್ಮದಿಯರಿಗೆ ಖಾದಿಯಾನ್ ಜಲ್ಸಕ್ಕೆ ಹೋಗಲು ಸಾಧ್ಯವಾಗದಿರುವ ಬಗ್ಗೆ ಬಹಳ ದುಃಖವಿದೆ. ಅಲ್ಲಾಹನು ಅವರ ನೋವನ್ನು ನಿವಾರಿಸುವ ವ್ಯವಸ್ಥೆ ಮಾಡಲಿ. ಅಲ್‌ಜೀರಿಯಾದ ಅಹ್ಮದಿಯರ ಕಷ್ಟವನ್ನು ಸಹ ಅಲ್ಲಾಹನು ದೂರ ಸರಿಸಲಿ. ಅಲ್ಲಿ ಕೆಲವರ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಲಾಗಿದೆ. ಅವರು ಸೆರೆಮನೆಯಲ್ಲಿದ್ದಾರೆ. ಅಲ್ಲಾಹನು ಅವರು ಬಿಡುಗಡೆ ಹೊಂದುವಂತೆ ಮಾಡಲಿ. ಶತ್ರುಗಳ ದೌರ್ಜನ್ಯ ಕೃತ್ಯಗಳು ವರ್ಧಿಸುವಾಗ ನಾವು ಸಹ ನಮ್ಮ ಸ್ಥಿತಿಯನ್ನು ಮೊದಲಿಗಿಂತ ಉತ್ತಮ ರೀತಿಯಲ್ಲಿ ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಪರಿವರ್ತಿಸಬೇಕು. ಹೆಚ್ಚು ಹೆಚ್ಚಾಗಿ ಪ್ರಾರ್ಥಿಸುತ್ತಾ ಇರಬೇಕು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 30-12-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon